**ಇಂದು ದಿನಾಂಕ:19.11.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : 2 ಮತ್ತು 6 ರಿಂದ 9 ಮತ್ತು 15 ನೇ ಪ್ರತಿವಾದಿ ಪರ ಶ್ರೀ.ಎಸ್.ಎಸ್.ಎಂ.ವಕೀಲರಿಂದಃ**

ನನ್ನನ್ನು ರಾಜ ಮತ್ತು ರಾಜು ಅಂತಲೂ ಕರೆಯುತ್ತಾರೆ. ಆ ರೀತಿ ಎರಡು ಹೆಸರಿನಿಂದ ಕರೆಯುತ್ತಾರೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿಲ್ಲ. ನನ್ನ ಪತ್ನಿ ಹೆಸರು ಜಯಂತಿ. ನಮಗೆ 3 ಜನ ಮಕ್ಕಳು. ಅವರೆಂದರೆ 1.ಸವಿತಾ, 2.ಪ್ರಕಾಶ ಮತ್ತು 3.ಸಿಂದು. ನನ್ನ ಮಗನಿಗೆ ಬಿ.ಆರ್.ಜಯ ಪ್ರಕಾಶ ಎಂಬ ಹೆಸರು ಇದೆ ಎಂದರೆ ಸರಿ. ನನಗೆ ರೇಷನ್ ಕಾರ್ಡ್ ಇದೆ. ರೇಷನ್ ಕಾರ್ಡ್ ದೃಢೀಕೃತ ಪ್ರತಿಯನ್ನು ಸಾಕ್ಷಿ ನೋಡಿ ಅದು ತನ್ನದೆ ಎಂದು ಒಪ್ಪಿಕೊಂಡ ಮೇರೆಗೆ ಅದನ್ನು **ನಿ.ಡಿ.1** ಎಂದು ಗುರುತಿಸಲಾಯಿತು. ನಾನು, ನನ್ನ ಪತ್ನಿ ಮತ್ತು ನನ್ನ ಮಗ vote ಹಾಕುತ್ತಿದ್ದೇವೆ ಎಂದರೆ ಸರಿ. 2022 ರಿಂದ 2024 ರವರೆಗೆ ಮತದಾರರ ಪಟ್ಟಿಯ ದೃಢೀಕೃತ ಪ್ರತಿಗಳನ್ನು ಸಾಕ್ಷಿ ನೋಡಿ ಗುರುತಿಸಿರುವುದರಿಂದ ಅವುಗಳನ್ನು ಕ್ರಮವಾಗಿ **ನಿ.ಡಿ.2 ರಿಂದ ನಿ.ಡಿ.4** ಹಾಗೂ ಸದರಿ 3 ದಾಖಲೆಗಳಲ್ಲಿ ಸಾಕ್ಷಿಯು ತನ್ನ, ತನ್ನ ಪತ್ನಿಯ ಹಾಗೂ ತನ್ನ ಮಗ ಫೋಟೋಗಳನ್ನು ನೋಡಿ ಗುರುತಿಸಿರುವುದರಿಂದ ಅವುಗಳನ್ನು ಕ್ರಮವಾಗಿ ನಿ.ಡಿ.2(ಎ) ರಿಂದ ನಿ.ಡಿ.2(ಸಿ), ನಿ.ಡಿ.3(ಎ) ರಿಂದ ನಿ.ಡಿ.3(ಸಿ) ಮತ್ತು ನಿ.ಡಿ.4(ಎ) ರಿಂದ ನಿ.ಡಿ.4(ಸಿ) ಎಂದು ಗುರುತಿಸಲಾಯಿತು. ದಾವಾ ಸಲ್ಲಿಸುವ ಕಾಲಕ್ಕೆ ದಾವಾ ಆಸ್ತಿ ನನ್ನ ಅಣ್ಣಂದಿರಾದ ಕರಿಯಪ್ಪ ಮತ್ತು ಶಿವನಂಜಪ್ಪ ರವರ ಜಂಟಿ ಹೆಸರಿನಲ್ಲಿ ಇತ್ತು. ನನಗೆ ಗೊತ್ತಿಲ್ಲದ ಹಾಗೆ ಮೋಸದಿಂದ ಖಾತೆ ಮಾಡಿಸಿಕೊಂಡಿದ್ದಾರೆ. ನನ್ನ ತಂದೆ ಹೆಸರಿನಿಂದ ಅವರಿಬ್ಬರ ಹೆಸರಿಗೆ ಖಾತೆ ಆಗಿರುತ್ತದೆ. ನನ್ನ ತಂದೆ ಹೆಸರಿನಿಂದ ಅವರ ಹೆಸರಿಗೆ ಖಾತೆ ಆಗಿರುವ ಬಗ್ಗೆ ದಾಖಲೆ ಕೊಟ್ಟಿರುವುದಿಲ್ಲ. ದಾವಾ ಸರ್ವೆ ನಂ.66/2 ರ ಪೈಕಿ ಯಾರ ಯಾರ ಹೆಸರಿನಲ್ಲಿ ಎಷ್ಟು ವಿಸ್ತೀರ್ಣ ಇದೆ ಅಂತ ಗೊತ್ತಿಲ್ಲ. ಸರ್ವೆ ನಂ.66/2 ರ ಪೈಕಿ 1 ಎಕರೆ 24 ಗುಂಟೆ ದೇವಿರಮ್ಮ ರವರ ಹೆಸರಿಗೆ ಖಾತೆ ಆಗಿದೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲು ಸಮಯ ಕೋರಿದ್ದು ಮುಂದೂಡಲಾಯಿತು.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**